CC

# ಬೇಲೂರಿನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿ.ಸಿ.ನಂ. 608/2021

| | | | |
|---|---|---|---|
| ಸಾಕ್ಷಿದಾರರ ಹೆಸರು | ಗುರುಸಿದ್ದಪ್ಪ ಎಲ್ ಪಿ | D.W | 1 |
| ತಂದೆಯ ಹೆಸರು | ಪುಪ್ಪೇಗೌಡ | | |
| ವಯಸ್ಸು | 56 ವರ್ಷ | | |
| ಉದ್ಯೋಗ | ಶಿಕ್ಷಕರು | ಪ್ರ.ವ.ಬೋ | |
| ವಾಸಸ್ಥಳ | ಲಕ್ಷ್ಮೀಪುರ | ದಿನಾಂಕಃ 19-03-2024 | |

**ಮುಖ್ಯ ವಿಚಾರಣೆಃ- ಶ್ರೀ. ಬಿ ವಿ ಎನ್ ವಕೀಲರಿಂದ ಆರೋಪಿ ಪರಃ**

ಈ ಪ್ರಕರಣದ ಪಿರ್ಯಾದುದಾರರು ನನಗೆ ಗೊತ್ತಿಲ್ಲ. ನನ್ನ ಮತ್ತು ಅವರ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ. ನಾನು ಯಾವತ್ತೂ ಈ ಪ್ರಕರಣದ ಪಿರ್ಯಾದುದಾರರ ಮನೆಗೆ ಹೋಗಿಲ್ಲ. ನಾನು ಪಿರ್ಯಾದುದಾರ ಬಳಿ ಹೋಗಿ ಜಮೀನು ಅಭಿವೃದ್ದಿ ಮಾಡಲು ಹಣಕಾಸಿನ ಸಹಾಯ ನೀಡಿ ಎಂದು ಕೇಳಿರುವುದಿಲ್ಲ. ಪಿರ್ಯಾದುದಾರರ ಮನೆ ಎಲ್ಲಿ ಎಂದು ನನಗೆ ಗೊತ್ತಿಲ್ಲ. ಪಿರ್ಯಾದುದಾರರು ಪದೇ ಪದೇ ಬಂದು ನನ್ನ ಬಳಿ ಹಣ ಕೇಳಿರುವುದಿಲ್ಲ. ನನಗೆ ಸೇರಿದ ಚೆಕ್ ನ್ನು ನಾನು ಯಾವತ್ತು ಎಂ ಆರ್ ರವಿಯವರಿಗೆ ನೀಡಿಲ್ಲ. ನಿಪಿ **1** ಚೆಕ್ ನ್ನು ಎಂ ಆರ್ ರವಿ ಯವರು ಬ್ಯಾಂಕಿಗೆ ಹಾಕಿರುವ ವಿಚಾರ ನನಗೆ ಗೊತ್ತಿಲ್ಲ. ಎಂ ಆರ್ ರವಿ ರವರು ನನಗೆ ಅವರ ವಕೀಲರ ಮುಖಾಂತರ ನನಗೆ ನೋಟೀಸು ನೀಡಿದ್ದರು. ಪಿರ್ಯಾದುದಾರರು ನೀಡಿದ ನೋಟೀಸಿಗೆ ನಾನು ಉತ್ತರವನ್ನು ನೀಡಿರುತ್ತೇನೆ. ಆ ಬಳಿಕ ಪಿರ್ಯಾದುದಾರರು ನನ್ನನ್ನು ಭೇಟಿ ಆಗಿರುವುದಿಲ್ಲ.

**2.** ಈ ಪ್ರಕರಣದಲ್ಲಿ ಎಂ ಆರ್ ರವಿ ರವರು ನನಗೆ ಸೇರಿದ ಚೆಕ್ ನ್ನು ಹಾಜರುಪಡಿಸಿರುತ್ತಾರೆ . ಅದನ್ನು ನಾನು ಈಗ ನೋಡಿರುತ್ತೇನೆ. ಸದರಿ ಚೆಕ್ ನಿಪಿ **1** ಚೆಕ್ ಆಗಿರುತ್ತದೆ ಎಂದು ಸಾಕ್ಷಿ ಚೆಕ್ ನ್ನು ನೋಡಿ ಹೇಳಿರುತ್ತಾರೆ. ನಿಪಿ **1** ಚೆಕ್ ನಲ್ಲಿ ಇರುವ ಬರವಣಿಗೆಗಳನ್ನು ನಾನು ಮಾಡಿರುವುದಿಲ್ಲ. ಸದರಿ ನಿಪಿ **1** ಚೆಕ್ ನನ್ನಿಂದ ಕಳೆದು ಹೋಗಿತ್ತು . ನನ್ನ ಒಟ್ಟು **3** ಚೆಕ್ ಗಳು ಕಳೆದು ಹೋಗಿದ್ದವು. ಸದರಿ ಕಳೆದುಹೋದ ಚೆಕ್ ಗಳನ್ನು ಯಾರೋ ಪಡೆದು ಹಾಕಿರುತ್ತಾರೆ. ಸದರಿ ಚೆಕ್ ಗಳನ್ನು ದಿಃ **08-11-2016** ರಂದು ಕಳೆದು ಹೋಗಿದ್ದು ಅದೇ ದಿನ ನಾನು ಬ್ಯಾಂಕಿಗೆ ಹೋಗಿ ಈ ಬಗ್ಗೆ ಮಾಹಿತಿ ಕೊಟ್ಟಿರುತ್ತೇನೆ. ನನ್ನ ಮನವಿಯಂತೆ ಬ್ಯಾಂಕಿನವರು **3** ಚೆಕ್ ಗಳನ್ನು ದಿಃ **15-11-2016** ರಂದು ಸ್ಟಾಪ್ ಮಾಡಿದ್ದರು. ನನ್ನ ಚೆಕ್ ಗಳು ಕಳೆದು ಹೋದ ಬಗ್ಗೆ ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ. ಈ ಬಗ್ಗೆ ಪೊಲೀಸರು ನನಗೆ ಹಿಂಬರಹವನ್ನು ನೀಡಿರುತ್ತಾರೆ. ಬ್ಯಾಂಕಿಗೆ ನಾನು ಮೇಲೆ ಹೇಳಿದಂತೆ ಮನವಿ ನೀಡಿದ ಬಗ್ಗೆ ಹಿಂಬರಹವನ್ನು ನೀಡಿರುತ್ತಾರೆ. ಈ ಬಗ್ಗೆ ನನ್ನ ಬಳಿ ದಾಖಲಾತಿಗಳು ಇರುತ್ತವೆ. ಈ ಪ್ರಕರಣವನ್ನು ರವಿಯವರು ದಾಖಲಿಸಿದ ನಂತರ ನಾನು ಅವರ ಮನೆಯ ಬಳಿ ಸುಮ್ಮನೆ ಹೋಗಿ ವಿಚಾರಿಸಿದಾಗ ರವಿಯವರು ಬ್ಯಾಂಕಿನಲ್ಲಿ ಸಾಕಷ್ಟು ಸಾಲವನ್ನು ಮಾಡಿರುತ್ತಾರೆ ಎಂದು ತಿಳಿದು ಬಂದಿರುತ್ತದೆ.

ಈ ಹಂತದಲ್ಲಿ ಮುಂದುವರೆದ ಮುಖ್ಯವಿಚಾರಣೆಗೆ ಶ್ರೀ. ಬಿ ವಿ ಎನ್ ವಕೀಲರು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸ ಇ ಓ

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಬೇಲೂರು